# ಪತ್ರಿಕಾ ಪ್ರಕಟಣೆ

## ಕಲಬುರಗಿ ಜಿಲ್ಲಾಡಳಿತ ಹಾಗೂ ನಗರ ಪೋಲೀಸ್ ಆಯುಕ್ತರ ವತಿಯಿಂದ ಹೋಳಿ ಹಬ್ಬದ ಪ್ರಯುಕ್ತ ದಿನಾಂಕ:06-03-2020 ರಂದು ನಡೆಸಿದ ಶಾಂತಿ ಸಭೆ ಕುರಿತು ಪತ್ರಿಕಾ ಪ್ರಕಟಣೆ

***********

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವದೇನೆಂದರೆ, ದಿನಾಂಕ:09-03-2020 ರಂದು ಕಾಮದಹನ ಮತ್ತು 10.3.2020 ರಂದು ದುಲಂಡಿ (ಬಣ್ಣ ಎರಚುವುದು) ಆಚರಿಸಲು ನಿರ್ಧರಿಸಲಾಗಿದ್ದು, ಈ ಪ್ರಯುಕ್ತ ನಗರದ ಹಿಂದು ಮತ್ತು ಮುಸ್ಲೀಂ ಭಾಂದವರು ಮತ್ತು ಕಾಮ ದಹನ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರರೊಂದಿಗೆ ಶಾಂತಿ ಸಭೆ ನಡೆಸಲಾಗಿರುತ್ತದೆ. ಇದರಲ್ಲಿ ಕಾಮ ದಹನ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ನೀಡಿದ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಯಿತು. ನಗರದಲ್ಲಿ ಒಟ್ಟು 275 ಸ್ಥಳಗಳಲಿ ಕಾಮದಹನ ನಡೆಯಲಿದ್ದು 24 ಬಂಡಿಗಳಲ್ಲಿ ಬಣ್ಣ ಎರಚುವುದು ನಡೆಯಲಿದ್ದು ಎಲ್ಲರು ಒಗ್ಗಟ್ಟಿನಿಂದ ಗಲಭೆ ಮಾಡದೇ ಹಬ್ಬ ಆಚರಿಸಲು ನಿರ್ಧರಿಸಲಾಯಿತು. ಈ ಸಭೆಯಲ್ಲಿ ಎಲ್ಲಾ ಕೋಮಿನ ಸಾರ್ವಜನಿಕರು ಭಾಗವಹಿಸಿ ಶಾಂತಿಯಿಂದ ಹಬ್ಬವನ್ನು ಆಚರಿಸುತ್ತೇವೆಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿರುತ್ತಾರೆ.

ಸದರಿ ಶಾಂತಿಯ ಸಭೆಯ ಮಾನ್ಯ ನಗರ ಪೋಲೀಸ್ ಆಯುಕ್ತರಾದ ಶ್ರೀ, ಎಮ್. ಎನ್. ನಾಗರಾಜ್, ಐಪಿಎಸ್, ಕಲಬುರಗಿ ನಗರ, ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಗಳಾದ ಶ್ರೀ, ಶಂಕ್ರಣ್ಣ ವಣಿಕ್ಯಾಳ ರವರುಗಳ ನೇತ್ರತ್ವದಲ್ಲಿ ಶಾಂತಿ ಸಭೆಯನ್ನು ನಡೆಸಲಾಗಿದ್ದು, ಹೊಳಿ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಈ ಕೆಳಕಂಡಂತೆ ಸೂಚನೆಗಳನ್ನು ಸಾರ್ವಜನಿಕರಿಗೆ ನೀಡಲಾಯಿತು.

1. ದಿನಾಂಕ:09-03-2020 ರಂದು ಕಾಮ ದಹನ ನಡೆಯಲಿದ್ದು ದಿ:10-03-2020 ರಂದು ಬಣ್ಣದ ಹಬ್ಬ ಆಚರಿಸಲಾಗುತ್ತಿದೆ
2. ಕಾಮ ದಹನ ಸಮಿತಿಯವರು ಹಬ್ಬ ಆಚರಿಸುವದಕ್ಕೆ ಸಂಬಂಧಪಟ್ಟ ಠಾಣಾಧಿಕಾರಿಗಳಿಂದ ಅರ್ಜಿ ಸಲ್ಲಿಸಿ ಅನುಮತಿ ಪಡೆದುಕೊಂಡು ಹಬ್ಬ ಆಚರಿಸಲು ಸೂಚಿಸಲಾಯಿತು
3. ಪಿ.ಯು.ಸಿ. ಮತ್ತು ಕೇಂದ್ರಿಯ ಪರೀಕ್ಷೆಗಳು ನಡೆಯುತ್ತಿರುವರಿಂದ ಒತ್ತಾಯ ಪೂರ್ವಕವಾಗಿ ಯಾವ ವಿದ್ಯಾರ್ಥಿಗಳ ಮೇಲೆ ಬಣ್ಣ ಹಾಕವುದು ಅಥವಾ ಮಹಿಳೆಯವರಿಗೆ ಮಕ್ಕಳಿಗೆ ವಿನಾಹಃ ಕಾರಣ ತೊಂದರೆ ನೀಡಿದಲ್ಲಿ ಕಾನೂನು ರೀತಿಯ ಕ್ರಮ ಜರೂಗಿಸಲಾಗುವುದು
4. ಕಲಬುರಗಿ ನಗರದ ವ್ಯಾಪ್ತಿಯಲ್ಲಿ ಒಟ್ಟು 1038 ರೌಡಿಗಳು ಇದ್ದು, ಹೊಳಿ ಹಬ್ಬದ ಸಂಧರ್ಭದಲ್ಲಿ ಇವರಿಂದ ತೊಂದರೆಯಾಗದಂತೆ ಮುನ್ನಚೆರಿಕೆ ಕ್ರಮ ಕೈಗೊಳ್ಳಲಾಗುವುದು, ಕಾನೂನನ್ನು ಯಾರು ಕೈಗೆತ್ತಿಕೊಳ್ಳಬಾರದು, ಅಂತಹ ವ್ಯಕ್ತಿಗಳ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು
5. ಮಂದಿರ, ಚರ್ಚ, ಮಸೀದಿ ಇತರೆ ಎಲ್ಲಾ ಧಾರ್ಮಿಕ ಸ್ಥಳಗಳಿಗೆ ಸೂಕ್ತ ಪೊಲೀಸ್ ಬಂದೋಬಸ್ತ ಮಾಡಲಾಗಿದೆ
6. 10 ಕೆ.ಎಸ್.ಅರ.ಪಿ ತುಕಡಿಗಳು , 500-ಹೋಮ್ ಗಾರ್ಡಗಳು ಹೆಚ್ಚುವರಿಯಾಗಿ ನಗರ ಮತ್ತು ಜಿಲ್ಲೆಯ ಪೊಲೀಸ್ ರೊಂದಿಗೆ ಕರ್ತವ್ಯಕ್ಕೆ ನಿಯೋಜಿಸಲಾಗಿದೆ

7. ಕಾಮ ದಹನ ಸಮಯದಲ್ಲಿ ಕಾಮ ದಹನಕ್ಕೆಂದು ಅನಧಿಕೃತವಾಗಿ ಅನುಮತಿ ಪಡೆಯದೇ ಬೇರೆಯವರ ಕಟ್ಟಿಗೆ ಸೌದೆ, ಇತ್ಯಾದಿಗಳನ್ನು ತಂದು ತೊಂದರೆ ನೀಡಬಾರದು
8. ಹೋಳಿ ಹಬ್ಬದ ದಿವಸಗಳಂದು ಮಕ್ಕಳಿಗೆ, ಯುವಕರಿಗೆ ಬೈಕ್ ಗಳನ್ನು ಪಾಲಕರು ನೀಡದಂತೆ ಎಚ್ಚರಿಕೆ ವಹಿಸಲು ಸೂಚಿಸಲಾಯಿತು, ಬೈಕ್ ಗಳಲ್ಲಿ ತ್ರೀಬಲ್ ರೈಡಿಂಗ್, ಮತ್ತು ಸೈಲೆನ್ಸರ್ ಪೈಪುಗಳನ್ನು ಬಿಚ್ಚಿ ಅಜಾಗರುಕತೆಯಿಂದ ವಾಹನ ಚಲಾಯಿಸಿದಲ್ಲಿ ನಿರ್ಧಾಕ್ಷಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು.
9. ಆಗ್ನಿ ಶಾಮಕ ದಳ ಮತ್ತು ಅಂಬುಲೆನ್ಸ ವ್ಯವಸ್ಥೆ, ನೀರಿನ ವ್ಯವಸ್ಥೆಗಾಗಿ ಮಹಾ ನಗರ ಪಾಲಿಕೆ ರವರಿಗೆ ಹಾಗೂ ವಿದ್ಯುಚ್ಚಕ್ತಿ ವ್ಯತ್ಯಯವಾಗದಂತೆ ಜೇಸ್ಕಾಂ ಕಲಬುರಗಿ ರವರಿಗೆ ಹಾಗೂ ಇನ್ನಿತರೆ ಹಲವು ಇಲಾಖೆಗಳಿಗೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.
10. ಹಾಗೂ ನಗರದ ಎಲ್ಲಾ ಮತ ಬಾಂಧವರು ಎಲ್ಲಾ ರೀತಿಯ ಸಹಕಾರವನ್ನು ನೀಡುವದರೊಂದಿಗೆ ದಿನಾಂಕ:10-03-2020 ರಂದು ಬಣ್ಣದ ಹಬ್ಬವನ್ನು ಮಧ್ಯಾಹ್ನ 2:00 ಗಂಟೆಗೆ ಸರಿಯಾಗಿ ಮುಕ್ತಾಯ ಮಾಡಬೇಕೆಂದು ಸೂಚಿಸಲಾಗಿದೆ.
11. ಕರೋನಾ ವೈರಸ್ ಸಂಬಂಧಿಸಿದಂತೆ ಜಗತ್ತಿನಾದ್ಯಂತ ಹಲವು ಪ್ರಕರಣಗಳು ಬೆಳಕಿಗೆ ಬರುತ್ತಿರುವದರಿಂದ ಮುನ್ನೆಚ್ಚರಿಕೆ ವಹಿಸಿಕೊಳ್ಳಲು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕೆಮಿಕಲ್ ಮುಕ್ತಬಣ್ಣವನ್ನು ಉಪಯೋಗಿಸಲು ಸಲಹೆ ನೀಡಲಾಗಿದೆ.
12. ಯಾವದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸಾರ್ವಜನಿಕರು ಸೌರ್ಹಾದದಿಂದ ನಡೆದುಕೊಳ್ಳುವ ಮೂಲಕ ಹಬ್ಬ ಆಚರಿಸುವಂತೆ ಹಾಗೂ ಶಾಂತಿ ಸುವ್ಯವಸ್ಥೆಗೆ ದಕ್ಕೆ ಬರುವಂತೆ ಯಾರಾದರೂ ಕೀಡಿಗೇಡಿಗಳು ನಡೆದುಕೊಂಡಲ್ಲಿ ಅಂತಹವರ ಬಗ್ಗೆ ತಕ್ಷಣ ಪೊಲೀಸ್‌ರಿಗೆ ಮಾಹಿತಿ ನೀಡಲು ಸೂಚಿಸಲಾಯಿತು. ಹಾಗೂ ಪೊಲೀಸ್ ಸಂಪರ್ಕಕ್ಕಾಗಿ ನಗರ ಪೊಲೀಸ್ ಕಂಟ್ರೋಲ್ ರೂಮ್ ನ ಎರಡು ದೂರವಾಣಿ ಸಂಖ್ಯೆಗಳನ್ನು ನೀಡಲಾಯಿತು 08472-228112 ಮತ್ತು 08472-228113.
13. ಹೋಳಿ ಹಬ್ಬದ ಆಚರಣೆ ಮಾಡುತ್ತಿರುವದರಿಂದ ಕಲಬುರಗಿ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಮಧ್ಯ ಮಾರಾಟ ನಿಷೇದ ಮಾಡಲಾಗಿದೆ.

ಪೊಲೀಸ್ ಆಯುಕ್ತರು
ಕಲಬುರಗಿ ನಗರ